# ಹುಡುಕಾಟ ಹುಡುಗಾಟ...

ರಾತ್ರಿ ಬಂದದ್ದೇ ಲೇಟು, ಊಟ ಆಯ್ತು ಇನ್ನೇನು ಮಲಗಬೇಕು ಅಂತಿದ್ದೆ, ಆಗಲೇ ನೆನಪಾಗಿದ್ದು ಒಹ್ ನಾಳೆ ಕನ್ಯಾ ನೋಡೊಕೆ ಹೋಗಬೇಕಲ್ವಾ ಅಂತಾ, ಪಕ್ಕದಲ್ಲೇ ಇವಳು ಮಲಗಿದ್ದಳು, "ನಾಳೆನೇ ಅಲ್ವಾ ಹೋಗೋದು ಕನ್ಯಾ ನೋಡ್ಲೋಕೆ" ಅಂದೆ, "ಹೂಂ ಇನ್ನೂ ನಾಳೆ... ಈಗಿಂದಲೇ ಏನೋ ತಯ್ಯಾರಿ ಮಾಡುತ್ತಿರುವ ಹಾಗಿದೆ..." ಅಂತಂದಳು. ಅಲ್ಲ ನಿಮಗೂ ಕುತೂಹಲ ಕಾಡುತ್ತಿರಬೇಕು ನನ್ನಾಕೆಯೊಂದಿಗೆ ನಾನ್ಯಾವ ಕನ್ಯೆ ನೋಡಲು ಹೊರಟಿದ್ದೇನೆಂದು, ಸಂಶಯವೇ ಬೇಡ, ಅತ್ತ ಸರಿದು ಮಲಗಿದ್ದವಳು, ನನ್ನೆಡೆಗೆ ತಿರುಗಿ "ರೀ ಕನ್ಯೆ ನೋಡೊಕೆ ಹೊರಟಿರೋದು ನನ್ನ ತಮ್ಮನಿಗೆ ನಿಮಗಲ್ಲ, ನೆನಪಿರಲಿ" ಅಂತ ಖಚಿತ ಮಾಡಿದಳು. "ಹೇಗೂ ನೋಡಲು ಹೊರಟಿದ್ದೇವೆ ಅದರಲ್ಲೇ ನನಗೂ ಇನ್ನೊಂದು ನೋಡಿಕೊಂಡು ಬರೋಣ ಅಂತಿದ್ದೆ" ಅಂದೆ. "ಏನು... ರಾತ್ರಿ ಅಲ್ಲಿ ಸೊಫಾ ಮೇಲೆ ಮಲಗೊ ಇರಾದೆ ಏನಾದ್ರೂ ಇದೆಯಾ" ಅಂತ ಧಮಕಿ ಹಾಕಿದ್ಲು, ಗುಮ್ಮನ ಹೆದರಿಕೆ ಹಾಕಿದಾಗ ಮಲಗುವ ಮಗುವಿನಂತೆ ತೆಪ್ಪಗೆ ತಲೆದಿಂಬಿಗೆ ಒರಗಿದೆ.

ಬೆಳಗಿನ ಜಾವ ನಾಲ್ಕೊ ಐದೋ ಆಗಿರಬೇಕು, ಬಾಗಿಲ ಬೆಲ್ ಸದ್ದಾಯಿತು, "ಯಾರಿರಬಹುದು" ಅಂತ ಏಳಬೇಕನ್ನುವಷ್ಟರಲ್ಲಿ ಇವಳು ಎದ್ದು ಹೊರಟಾಗಿತ್ತು, ಬೆಲ್ ಸದ್ದಿಗೇ ಕಾಯುತ್ತ ಮಲಗೇ ಇರಲಿಲ್ಲವೇನೊ, "ಅಮ್ಮ ಅಪ್ಪ ಬಂದಿರಬೇಕು" ಅನ್ನುತ್ತ, ಏನು ಉತ್ಸಾಹ ನೋಡಿ, "ಹೂಂ... ಹಾಗಿದ್ದರೆ ಸರಿ ಬಿಡು" ಅನ್ನುತ್ತ ಮತ್ತೆ ಮುಸುಕೆಳೆದೆ. ಮಾವ ಸಕುಟುಂಬ ಪರಿವಾರ ಸಮೇತರಾಗಿ ಆಗಮಿಸಿದ್ದರು, ಮದುವೆಗೆ ಬಂದಂತೆ. ಬಾಗಿಲು ತೆಗೆದು ಅವರ ಕೂರಿಸಿ ಬಂದವಳು. "ರೀ, ಏಳ್ರೀ, ಅಪ್ಪ ಅಮ್ಮ ಬಂದೀದಾರೆ ಇನ್ನೂ ಏನು ಮಲಗೀದೀರ" ಅಂತ ಮುಸುಕೆಳೆದಳು, "ಈಗಲೇ ಏಳಬೇಕಾ, ಸೂರ್ಯ ಕೂಡ ಕಣ್ಣು ತೆರೆದಿಲ್ಲ" ಅಂದೆ. ಇವಳ ಕಣ್ಣು ಇನ್ನಷ್ಟು ತೆರೆದು ಸೂರ್ಯನಂತೆ ಕೆಂಪಾಗಿ ಮಿನುಗಿದವು.. ಇನ್ನು ಏಳದಿದ್ರೆ ಮುಕ್ಕಣ್ಣನ ಮೂರನೇ ಕಣ್ಣು ಇವಳಿಗೂ ಇದ್ರೆ ಅದನ್ನೂ ತೆರೆದಾಳು ಅನ್ನುತ್ತಾ "ಅವರಿಗೆ ಕಾಫಿ ಟೀ ಏನಾದ್ರೂ ಮಾಡು ಹೋಗು" ಎಂದು ಹೇಳಿ ಎದ್ದೆ.

ವರಾಂಡದಲ್ಲಿ ಇವಳಪ್ಪ ಅಲಿಯಾಸ ನನ್ನ ಮಾವ, ಇವಳ ತಮ್ಮ ಕೂತಿದ್ದರು ಭಾರತ ಪಾಕಿಸ್ತಾನ ಪ್ರಧಾನಿಗಳಂತೆ ಒಬ್ಬರು ಒಂದೊಂದು ವಿರುದ್ಧ ದಿಕ್ಕಿಗೆ ನೋಡುತ್ತ. ನಾ ಸಂಧಾನಕಾರರಂತೆ ಅಲ್ಲಿ ಪ್ರವೇಶಿಸಿದೆ, ಮಾವ ಎದ್ದು "ಅಯ್ಯೊ ಇನ್ನೂ ಬೆಳಗಿನ ಜಾವ ಬೇಗ ಯಾಕೆ ಏಳೋಕೆ ಹೋದಿರಿ" ಅಂತ ಸಂಕೋಚ ಪಟ್ಟುಕೊಂಡರು, ಇಷ್ಟು ಬೇಗ ಬಂದು ಎಬ್ಬಿಸಿದಮೇಲೆ ಯಾಕೆ ಎದ್ದಿರಿ ಅಂತ ಕೇಳಿದ್ರೆ ಏನ್ ಹೇಳಬೇಕು, "ನಿಮ್ಮ ಮಗಳು ಬಿಡಬೇಕಲ್ಲ, ನನಗೇನು ಇನ್ನೂ ಹೊತ್ತೇರುವವರೆಗೆ ಮಲಗಿರ್ತಿದ್ದೆ" ಅನ್ನುತ್ತ ಪ್ರಯಾಣ ಚೆನ್ನಾಗಿತ್ತಾ ಅಂತ ಕುಶಲೋಪರಿಗಿಳಿದೆ... ಅದೇ ಅವಳ ತಮ್ಮ ಅಲ್ಲೇ ಕೂತಿದ್ದ ಒಂದು ಸಾರಿ ದುರುಗುಟ್ಟಿ ನೋಡಿದೆ, ನನ್ನ ನೀಲವೇಣಿಯ nil ವೇಣಿ ಮಾಡಿದ ಕೋಪ ಇನ್ನೂ ಇತ್ತಲ್ಲ ಮತ್ತೆ ನನ್ನವಳ ಜಡೆ ಕತ್ತರಿಸಲು ಕಾರಣನಾದ ಅವನ ಮೇಲೆ ಸಿಟ್ಟಿರದೇ ಬಿಟ್ಟೀತೇ, ಅವನಿಗೂ ಗೊತ್ತಾಗಿರಬೇಕು "ಭಾವ ಸಾರಿ... ಅದು ಅಕ್ಕನ ಜತೆ ಆಟ ಮಾಡ್ತಾ, ಅವಳ ಜಡೆ..." ಅಂತ ತಲೆ ಕೆಳಗೆ ಮಾಡಿದ. ಸ್ವಲ್ಪ ಗಂಟಲು ಸರಿ ಮಾಡಿಕೊಂಡೆ ಮಾತಾಡಲಿಲ್ಲ ಅಳಿಯ ಅಂತ ಗತ್ತು ತೋರಿಸಬೇಕಲ್ಲ. ಮಾವ "ಏನೊ ಹುಡುಗಾಟ ಹಾಗಾಯ್ತು, ಬೇಜಾರ ಮಾಡ್ಕೋಬೇಡಿ" ಅಂತಂದರು. ಪಾಪ ಎಲ್ಲಿ ಅಳಿಯಂದ್ರಿಗೆ ಬಹಳ ಸಿಟ್ಟು ಬಂದಿದೆಯೇನೊ ಅನ್ನುವಂತೆ. **"ಮದುವೆ ಆಗೊ ವಯಸ್ಸಾಯ್ತು ಇನ್ನಾದ್ರು ಹುಡುಗಾಟ ಕಮ್ಮಿ ಆಗಬೇಕಲ್ಲ"** ಅಂತನ್ನುತ್ತ ಮಾವ ಅವರಿಗೆ ಫ್ರೆಷ್ ಆಗಿ ಅಂತ ಬಾತರೂಮ ಅಲ್ಲಿದೆ ಅಂತಿದ್ದೆ. ಇವಳು ಬಂದು "ಮದುವೆ ಆಗೀನೇ ನಿಮ್ಮ ಹುಡುಗಾಟ ಇನ್ನೂ ಕಮ್ಮಿಯಾಗಿಲ್ಲ, ಅವನಿಗೇನು ಹೇಳ್ತಿದೀರ" ಅಂತನ್ನುತ್ತ ಚಹ ಕಪ್ಪುಗಳ ತೆಗೆದುಕೊಂಡು ಬಂದಳು, ಎಷ್ಟೇ ಅಂದರೂ ತಮ್ಮನ ಮೇಲೆ ಪ್ರೀತಿ, ಅವನ ಪರ ವಹಿಸಿ ಮಾತಾಡದಿರುತ್ತಾಳಾ. ಹಾಗೇ ಒಮ್ಮೆ ವಾರೆ ನೋಟದಲ್ಲಿ ಅವಳತ್ತ ಸಿಟ್ಟಿನಿಂದ ನೋಡಿದೆ, ಗಂಭೀರವಾಗಿ ಹೇಳಿದ್ದನ್ನು ಅಷ್ಟು ಸಲೀಸಾಗಿ ತಳ್ಳಿಹಾಕುತ್ತಿದ್ದಳಲ್ಲ ಅನ್ನುವಂತೆ. ಅವಳಿಗೆ ಅರ್ಥವಾಗಿರಬೇಕು, ಅವನಿಗೆ ಟೀ ಕೊಡುತ್ತ "ನಿನ್ನ ಒಳ್ಳೆದಕ್ಕೇ ಹೇಳ್ತಿರೊದು ಅವರು... ಏನು?" ಅಂದ್ಲು ತಮ್ಮನಿಗೆ, ಅವನೂ ತಲೆಯಲ್ಲಾಡಿಸಿದ. ಪಾಕಶಾಲೆಯಿಂದ ಅವಳ ಅಮ್ಮ ಬಂದರು, ಆ ಹಸನ್ಮುಖಿ ಮುಖ ನೋಡುತ್ತಿದ್ದಂತೆ ಬಂದಿದ್ದ ಸಿಟ್ಟೆಲ್ಲ ಜರ್ರನೇ ಇಳಿದು ಹೋದಂತಾಯಿತು. ಎಂಥ ಪರಿಸ್ಥಿತಿಯಲ್ಲೂ ಆ ನಗು ಹಾಗೆ ಇದ್ದೆ ಇರುತ್ತದೆ, ಬಹುಶ: ಇವರಿಗೆ ಫೊಟೊ ತೆಗೆಯುವಾಗ ಯಾರೋ ಸ್ಮೈಲ್ ಪ್ಲೀಜ ಅಂತ ಹೇಳದೇ ಕೀಪ್ ಸ್ಮೈಲಿಂಗ್ ಪ್ಲೀಜ್ ಅಂದಿರಬೇಕು, ಮಾತಾಡಿದರೆ ಎಲ್ಲಿ ಮುತ್ತು ಉದುರೀತು ಅಂತ ಎಲ್ಲೊ ಎರಡು ಮಾತು ಮತ್ತೆ ಚಿಕ್ಕ ಕಿರುನಗು, ನನ್ನಾಕೆ ಥೇಟ ಇದೇ ಹೋಲಿಕೆ ಅದಕ್ಕೇ ಅಲ್ವೇ ನನಗೇ ಇಷ್ಟವಾಗಿದ್ದು. ಅವರ ನೋಡುತ್ತಿದ್ದಂತೆ ನನ್ನ ಮುಖದಲ್ಲೂ ಒಂದು ಮುಗುಳ್ನಗು ಮಿಂಚಿತು ಪರಿಸ್ಥಿತಿ ತಿಳಿಯಾಯ್ತು.

ಚಹ ಎಲ್ಲ ಆಯ್ತು, ಸ್ನಾನಕ್ಕೆ ಹೊರಟ ತಮ್ಮನಿಗೆ, "ಕಡಲೇ ಹಿಟ್ಟು ಇಟ್ಟೀದೀನಿ, ಅದನ್ನೇ ಹಚ್ಕೋ ಮುಖ ಸ್ವಲ್ಪ ಖಳೆ ಬರತ್ತೆ" ಅಂದ್ಲು. ಮುಸಿ ಮುಸಿ ನಕ್ಕೆ... "ಯಾಕ್ರೀ" ಹುಬ್ಬು ಗಂಟಿಕ್ಕಿದಳು, "ಆ ಮುಖಕ್ಕೆ ಏನು ಹಚ್ಚಿದರೂ ಅಷ್ಟೇ" ಅಂದೆ . "ಯಾಕ್ರೀ ನನ್ನ ತಮ್ಮನಿಗೆ ಏನಾಗಿದೆ" ಅಂತ ಜಗಳಕ್ಕೆ ಬಂದಳು, "ಏಯ್ ನಿನ್ನ ತಮ್ಮ ಹೃತಿಕ, ಹೃತಿಕ ಇದ್ದ ಹಾಗೇ ಇದಾನೆ" ಅಂದೆ. "ಹೃತಿಕ ಅಂತ

ಹೇಳಿದ್ರೆ ಬಿಡ್ತೀನಿ ಅಂತ ಅನ್ಕೊಂಡಿದೀರಾ, ನನ್ನ ಮುದ್ದಿನ ಹೃತಿಕ್ ನೀವೇ ಮಾತ್ರ" ಅಂತನ್ನುತ್ತ ಹತ್ತಿರ ಬಂದಳು, ಅದ್ಯಾವ ಆ್ಯಂಗಲ್ಲಿನಲ್ಲಿ ಅವಳಿಗೆ ಹಾಗೆ ಕಂಡೆನೊ ದೇವರೇ ಬಲ್ಲ. ಅವರಮ್ಮ ಅಲ್ಲಿ ಬಂದದ್ದರಿಂದ ಅಲ್ಲಿಂದ ಕಾಲು ಕಿತ್ತಳು, "ಅತ್ತೆ, ಮತ್ತೇನು ಸೊಸೆ ಬರ್ತಾಳೆ ಮನೆಗೆ ಇನ್ನ" ಅಂತ ಮಾತಿಗೆಳೆದೆ "ಹೂಂ ಏನು ಎಲ್ಲಾ ಹೊಂದಿಕೊಂಡು ಹೋದ್ರೆ ಸಾಕು, ಎಲ್ಲಾ ಅವನಿಷ್ಟ, ನೀವೆ ಮುಂದೆ ನಿಂತು ಮಾಡಬೇಕು" ಅಂತ ನಮ್ಮ ಮೇಲೆ ಭಾರ ಹಾಕಿದ್ರು. ಸ್ನಾನ ಮುಗಿಸಿ ಅವನೂ ಹೊರಬಂದ, "ನಿನ್ನ ತಮ್ಮ ಲಕ ಲಕ ಹೊಳೀತಾ ಇದಾನೇನು ನೋಡು" ಅವಳ ಕರೆದೆ, ಅತ್ತೇ ಸೋಫಾ ಮೇಲೆ ಆಸೀನರಾದರು ಮತ್ತದೇ ಮುಗುಳ್ನಗುವೊಂದಿಗೆ. "ಅತ್ತೆ, ನನಗೊಬ್ಬ ಬಾಬ ಕಟ್ ಮಾಡಿದ ಹುಡುಗಿ ಗೊತ್ತೀದ್ದಾಳ ನೋಡ್ತೀರಾ" ಅಂತ ಕಾಲೆಳೆದೆ, ಅಲ್ಲಿಂದಲೇ, ಅವ ಕೂಗಿದ "ಭಾವ ಬೇಡ ಭಾವ", ಇವಳು ಬಂದು "ರೀ ನಿಮ್ದು ಅತಿಯಾಯ್ತು, ಅವನ ಮೇಲೆ ಯಾಕ್ರೀ ನಿಮಗೇ ಅಷ್ಟು ಸಿಟ್ಟು, ಪಾಪ" ಅಂದಳು. "ಏನೊಪ್ಪಾ ನನಗೆ ಗೊತ್ತಿರೊ ಹುಡುಗಿ ಬಗ್ಗೆ ಹೇಳಿದೆ" ಅಂದೆ. "ಸಂಪ್ರದಾಯ ಮನೆತನದ ಸುಲಕ್ಷಣ ಹುಡುಗಿ ಯಾರಾದ್ರೂ ಗೊತ್ತಿದ್ರೆ ಹೇಳಿ" ಅಂದ್ಲು "ಹೂಂ ಸ್ವಲ್ಪ ಸ್ಮಾರ್ಟ್ ಆಗಿರೊ ಕೆಲಸ ಮಾಡ್ತಿರೋ ಹುಡುಗಿ ನೋಡ್ತಿದೀವಿ" ಅಂತ ಅವರಪ್ಪ ಬೇರೆ ದನಿಗೂಡಿಸಿದರು, "ಸ್ಮಾರ್ಟ್ ಹುಡುಗೀ ಬೇಕೇನೊ" ಅಂದೆ "ಹೂಂ" ಅನ್ನುತ ನಾಚಿದ "ಐಷ್ವರ್ಯಾ ರೈ ಗೆ ಕೇಳಬೇಕೆಂದ್ರೆ ಮದುವೆ ಆಗೊಯ್ತು." ಅಂತಿದ್ದಂಗೆ "ಪಾಪ ನಿಮಗಾಗೇ ಕಾಯ್ತಾ ಇದ್ಲು, ನೀವ್ ನನ್ನ ಮದುವೆ ಆದದ್ದು ಗೊತ್ತಾದ ಮೇಲೆ ಅವಳು ಬೇರೆ ಮದುವೆ ಆಗಿದ್ದು.. ಪ್ಚ್!" ಅಂತ ಇವಳಂದಳು, ಎಲ್ರೂ ನಕ್ರು.

ರೆಡಿಯಾದೆ, ಅವಳ ತಮ್ಮನಿಗಿಂತ ನಾನೇ ಟಿಪ್ ಟಾಪ್ ಆಗಿ, ಇವಳು ಅಸಹನೆಯಿಂದಲೇ ನೋಡುತ್ತಿದ್ದಳು ನಾ ಒಳಗೊಳಗೇ ನಗುತ್ತಿದ್ದೆ, ಮೊದಲ ಮನೆಯಲ್ಲಿ ಬರ್ಜರಿ ಸ್ವಾಗತವಾಯಿತು, ಭಲೇ ಶ್ರೀಮಂತರು ಅನಿಸತ್ತೆ ಒಬ್ಬಳೆ ಮಗಳು ಕಾರು ಬಂಗಲೆ ಎಲ್ಲ ಇದೆ ಅಂತ ಮೊದಲೇ ಕೇಳಿದ್ದೆ, ಯಾಕೊ ಅಷ್ಟು ಶ್ರೀಮಂತರು ಅಂದಿದ್ದಕ್ಕೆ ಎಲ್ಲ್ ಸಪೊರ್ಟ ಇರತ್ತೆ ಭಾವ ಅಂತ ಬೇರೆ ಇವನು ಹೇಳಿದ್ದ, ಮದುವೇ ಆಗೊನು ಅವನು ತಾನೆ ನನಗೇನು ಅಂತ ಹೊರಟಿದ್ದೆ, ಹುಡುಗಿ ಬಂದು ಕೂತಳಂತೆ ಕಾಣತ್ತೆ "ಎಲ್ಲೇ ಹುಡುಗಿ ಅಂದೆ", ಅದೋ ಅಲ್ಲಿ ಅಂತ ತೋರಿಸಿದಳು  ಶ್ರೀಮಂತರು ತಿನ್ನೋಕೆ ಏನೂ ಕಡಿಮೆ ಮಾಡಿದಂತಿರಲಿಲ್ಲ, ಹುಡುಗಿಗೆ ಪಾಪ ಕೂರಲು ಚೇರು ಕೂಡ ಸಾಲುತ್ತಿರಲಿಲ್ಲ. **"ನಾನಂತೂ ಹುಡುಗಿಯ ಅಮ್ಮ ಇರಬೇಕು ಅನ್ಕೊಂಡಿದ್ದೆ"** ಅಂದೆ, ಇವಳು ಬಂದ ನಗು ತಡೆದುಕೊಂಡು "ರೀ ಸುಮ್ನಿರಿ" ಅಂದ್ಲು "ಅಲ್ಲ ಕಣೆ ಹುಡುಗೀ ಜತೆ ಕ್ರೇನ ಒಂದು ಫ್ರೀಯಾಗಿ ಕೊಡ್ತಾರಾ ಕೇಳು ನಿನ್ನ ತಮ್ಮ ಅಡಿಯಲ್ಲಿ ಸಿಕ್ರೆ ಎತ್ತೋಕೇ ಬೇಕಾಗತ್ತೆ" ಅಂದೆ. ಮಾವನಿಗೆ ಇಷ್ಟ ಇತ್ತು ಆಸ್ತಿ ಪಾಸ್ತಿ ಎಲ್ಲ ನೋಡಿ, ಅವಳಿಗಾಗೇ ಮನೆ ತುಂಬಾ ಸೊಫಾಗಳನ್ನೇ ಹಾಕಲು ಕೂಡ ಯೋಚಿಸಿರಬೇಕು!, ಇವನಿಗೆ ಹುಡುಗಿ ಹೇಗೆ ತಾನೇ ಇಷ್ಟವಾದಾಳೂ.

ಎರಡನೇ ಮನೆ ಎಲ್ಲಿ ಅಂದೆ, ಮನೆ ಅಲ್ಲ ಹೊಟೇಲು ಅಂದ್ಲು "ಹಾಂ ಹೊಟೇಲಾ" ಅಂದೆ "ರೀ ಹುಡುಗೀ ಒಬ್ಳೇ ಬರ್ತಾ ಇದಾಳೆ ಅವಳಿಗೆ ಓಕೇ ಆದ್ರೆ ಆಮೇಲೆ..." ಅದೂ ಸರಿ, ಅಂತ ಅಲ್ಲಿ ಹೋದರೆ ಕಾಲ ಮೇಲೆ ಕಾಲು ಹಾಕಿ ಮೊಬೈಲು ಅತ್ತಿಂದಿತ್ತ ತಿರುಗಿಸುತ್ತ ಕೂತ ಹುಡುಗಿ ಕಾಣಿಸಿತು, ಹುಡುಗ ಅವಳ ಮಾತಾಡಿಸುವ ಮುಂಚೆ ಅವಳೇ ಅವನ ಮೇಲೆ ಪ್ರಶ್ನೆಗಳು ಸುರಿಮಳೆಗರೆದಳು, ನನ್ನ ಕೆಲಸದ ಇಂಟರವೀವ್ ಕೂಡ ಅದಕಿನ್ನ ಪಾಡು. ನಮಗೇನು ಕೆಲಸ ಅಲ್ಲಿ ಅನ್ನುವಂತೆ ಟೆನ್ನಿಸ ನೋಡುವ ಹಾಗೆ ಅವಳನ್ನೊಮ್ಮೆ ಅವನನ್ನೊಮ್ಮೆ ನೋಡುತ್ತ ಕೂತದ್ದಾಯಿತು, ಅವರದೇ ಮಾತುಕತೆ ಮುಗಿದಾದ ಮೇಲೆ ಇನ್ನು ನೀವೇನಾದ್ರೂ ಮಾತೋಡೊದು ಇದೆಯಾ ಅಂತ ಕೇಳಿದ್ದಕ್ಕೆ, ಇವಳು "ಹೊರಡೋಣವಾ" ಅಂತಂದಳು. "ಐ ವಿಲ ಗೇಟ್ ಬ್ಯಾಕ ಟು ಯು(ನಾ ನಿಮಗೆ ಆಮೇಲೆ ಏನಂತ ಹೇಳ್ತೀನಿ)" ಅಂತ ಅ ಹುಡುಗಿ ಹೊರಟಳು ಥೇಟ್ ನಮ್ಮ ಕೆಲಸದ ಇಂಟರವೀವಗಳು ಆದ ಮೇಲೆ ಹೇಳುವ ಮ್ಯಾನೇಜರಗಳಂತೆ. ಅವನೋ ಹಿರಿ ಹಿರಿ ಹಿಗ್ಗಿದ್ದ, "ಭಾವ ಏನ್ ಕಾನ್ಫಿಡೆನ್ಸ(ಆತ್ಮವಿಶ್ವಾಸ) ಇತ್ತು ಅವಳಲ್ಲಿ ನೋಡಿದ್ರಾ" ಅಂತಂದ. ನಾನೇನೋ ಹೇಳೊ ಮುಂಚೆ ಅವರಮ್ಮ "ನಮ್ಮನೆಗೆ ಸರಿ ಹೋಗಲ್ಲ ಬಿಡು" ಅಂತ ತಳ್ಳಿಹಾಕಿದ್ರು.

"ಇನ್ನೆಲ್ಲಿ ಮನೆ ಹೊಟೇಲು ಆಯ್ತು ಪಾರ್ಕಾ" ಅಂದೆ. ಅವಳು "ನೀವು ನಿಮಗೆ ಬೇಕಿದ್ರೆ ಅಲ್ಲೇ ಹುಡುಕಿಕೊಳ್ಳಿ" ಅನ್ನುತ್ತಲೇ ಮತ್ತೊಂದು ಮನೆ ಮುಂದೆ ನಿಂತಿದ್ದೆವು ಪಕ್ಕ ಸಂಪ್ರದಾಯಸ್ತ ಕುಟುಂಬವಂತೆ, ಮನೆಗೆ ಹೋಗುತ್ತಲೇ ಕಾಲು ತೊಳೆಯಲು ನೀರು ಕೊಟ್ಟರು, ಇವನು ಸಾಕ್ಸ ಬಿಚ್ಚಲ್ಲ ಅಂತ ಹಾಗೆ ಒಳ ನಡೆದ. ಹಳೆ ಕಾಲದ ಮನೆ, ನನ್ನ ಮುಂದೆ ಒಂದು ಚೇರು ತಂದಿಟ್ಟರು, ಅದು ನನಗಲ್ಲ ಅನ್ನುವಂತೆ ಆ ಕಡೆ ದೂರ ಸರಿದು ನಿಂತೆ, ಮತ್ತೆ ಅಲ್ಲಿ ನನ್ನ ಮುಂದೆ ತಂದು ಪ್ರತಿಷ್ಟಾಪಿಸಿದ್ರು, ನನಗೋ ಗೊತ್ತಾಗಿ ಹೋಯ್ತು ನನ್ನೇ ವರ ಅಂತ ತಿಳಿದಿದ್ದಾರೆ ಅಂತ, "ಬಾರೋ ಕೂತ್ಕೊ ಅಂತ ಅವನ ಕರೆದೆ". "ಅವರು ಅಲ್ಲಿ ಕೂರ್ತಾರೆ, ನೀವು ಕೂತ್ಕೋಳ್ಳಿ" ಅಂತ ಹುಡುಗಿಯ ಅಪ್ಪ. ವರನ ಜತೆ ವರನ ಗೆಳೆಯ ಯಾರೊ ಬಂದಿರಬೇಕು ಅಂತ ಅವರನಿಸಿಕೆ, ಮತ್ತಿನ್ನೆನು, ಜೀನ್ಸು ಹಾಕಿಕೊಂಡು ಸಾಕ್ಸು ಕೂಡ ಕಳೆಯದೆ ಹಾಗೆ ಅವರ ಮನೆಗೆ ನುಗ್ಗಿದ ಇವನ್ಯಾರೊ ಬೇರೆ ಇರಬೇಕು ಅಂತ ಎಣಿಸಿದ್ದರೆ ಅವರದೇನು ತಪ್ಪು, ಅಷ್ಟರಲ್ಲಿ ಇದನ್ನು ಗಮನಿಸಿದ ನನ್ನಾಕೆ "ಏನ್ರೀ ಇಲ್ಲಿ ಬನ್ರಿ" ಅಂತ ಕರೆದಳು, "ನನ್ನ ಹೆಂಡತಿ ಕರೀತಿದಾಳೆ ಬಂದೆ" ಅಂತ ಅವನ ಕೂರಿಸಿ ಅವಳ ಪಕ್ಕ ಹೋಗಿ ಕೂತೆ ಆಗಲೇ ಅವರಿಗೆ ಗೊತ್ತಾಗಿದ್ದು, ಅಕ್ಕ ಭಾವ ಅಂತ. ಅಂತೂ ನೋಡಿಯಾದ ಮೇಲೆ, ಹೊರಬಂದರೆ, ಇವಳು ನನ್ನ ತಿವಿಯುತ್ತಾ "ಮೊದಲೇ ಹೇಳಿದೆ ನೀವ್ ಜಾಸ್ತಿ ಏನ್ ಟಿಪ್ ಟಾಪ್ ಆಗಿ ತಯ್ಯರಾಗೋದು ಬೇಡ ಅಂತ, ನೀವ್ ಕೇಳಬೇಕಲ್ಲ" ಅಂತ ಬಯ್ಯುತ್ತಿದ್ಲು, "ನೋಡಿದ್ಯಾ ನನಗಿನ್ನೂ ಮದುವೆಯಾಗಿದೆ ಅಂತ ಯಾರಿಗೂ ಅನಿಸಲ್ಲ" ಅಂತ ನಾ ಖುಷಿಯಾಗುತ್ತಿದ್ದೆ, ಆದರೆ ಇನ್ನು ಮುಂದೆ ನಾನು ಅವರೊಂದಿಗೇನು ಬರೊದು ಬೇಡ ಅಂತ ಅವಳು ತೀರ್ಮಾನ ಮಾಡಿ ಆಗಿತ್ತು. ಒಳ್ಳೆದೇ ಅಯ್ತು ಅಂತ ಮನೆ ಕಡೆ ಹೊರಟೆ, ಅವರಮ್ಮನಿಗೆ ಬಹಳ ಹಿಡಿಸಿತ್ತು ಈ ಸಂಬಂಧ, "ಮನೇನಾ ಸರ್ಕಸ್ ಕಂಪನೀನ ಅದು"

ಅಂತ ಆ ಅವಿಭಕ್ತ ಕುಟುಂಬ ಒಲ್ಲದಾಗಿದ್ದ ಮಗ. ನಾನನ್ಕೋತಾ ಇದ್ದೆ ಎಲ್ರಿಗೂ ಹಿಡಿಸಿದ್ರೂ ಅವರೇ ಮೊದಲು ಒಪ್ಪೋದಿಲ್ಲ ಹುಡುಗನ್ನ ಅಂತ...

ಇನ್ನೂ ನಾಲ್ಕೈದು ನೋಡಿ ಇವರು ಮನೆಗೆ ಬಂದಾಗ ರಾತ್ರಿಯಾಗಿತ್ತು, ಒಂದೂ ಇಷ್ಟವಾಗಿರಲಿಲ್ಲ, ಒಬ್ಬಳ ಮೂಗು ಸರಿ ಇಲ್ಲ ಅಂದ್ರೆ ಇನ್ನೊಬ್ಬಳ ನಡೆ ಸರಿ ಇಲ್ಲ, ಎಲ್ಲ ಸರಿ ಇದೆ ಎಂದಾದರೆ ಮನೆ ಚೆನ್ನಾಗಿಲ್ಲ, ಇನ್ನೇನು ಇಷ್ಟವಾದ್ರೆ ಅವರ ಒಪ್ಪಲಿಕ್ಕಿಲ್ಲ. ಅಂತೂ ಹುಡುಕಾಟ ಇನ್ನೂ ಜಾರಿಯಾಗಿರುವಂತೆ ಕಂಡಿತು.

ಈ ಒಳ್ಳೆ ಕನ್ಯೆಗಾಗಿ ಹುಡುಕಾಟದ ಕಾಟ ಯಾರಿಗೂ ತಪ್ಪಿದ್ದಲ್ಲ, ಎಲ್ಲೊ ಮೊದಲೇ ಮನೆಯಲ್ಲೆ ಸಂಬಂಧಿಕರ ಹುಡುಗಿ ಅಂತ ನಿರ್ಧರಿಸಿದ್ದರೆ, ಇಲ್ಲ ಹುಡುಗ ತಾನೆ ಯಾರನ್ನೋ ಹುಡುಕಿಕೊಂಡ ಹೊರತು ಇದೆಲ್ಲ ಆಗೋದೆ. ಎಲ್ಲರ ಇಷ್ಟ ಕಷ್ಟಗಳ ಹೊಂದಾಣಿಕೆ ಮಾಡಿ ಹೆಂಡತಿ ಅಂತ ಹುಡುಗನಿಗೆ ಸಿಗುವ ಹೊತ್ತಿಗೆ ರಾಮಾಯಣ ಮಹಾಭಾರತ ಕಥೆಗಳಾಗಿರುತ್ತವೆ ಮನೆಗಳಲ್ಲಿ, ಯಾಕೆಂದರೆ ಮನೆಗೆ ಬರುವವಳು ಬರೀ ಅವನ ಹೆಂಡ್ತಿಯಾಗಿರದೇ ಮನೆಯ ಸೊಸೆ ಕೂಡ ಆಗಿರುವುದರಿಂದ. ಈಗೇನು ಮ್ಯಾಟ್ರಿಮೋನಿಯಲ ಅಂತ ವೆಬಸೈಟುಗಳು, ಬ್ರೋಕರಗಳು ಬಂದೀದಾರೆ ಅವರಿಗೆ ದುಡ್ಡು ಸುರಿದರೆ ಸಾಕು ನಿಮ್ಮ ಎತ್ತರ, ತೂಕ, ಅಳತೆ, ಸ್ಟೇಟಸ್ಸು, ಜಾತಿ, ಊರು ಎಲ್ಲ ಸೇರಿ ಹೊಂದಿಕೆಯಾಗುವಂಥ ಹತ್ತಿಪ್ಪತ್ತು ಹುಡುಗಿಯರ ಹುಡುಕಿ ಕೊಟ್ಟುಬಿಡುತ್ತಾರೆ, ಅದರಲ್ಲೇ ಅಳೆದು ಸುರಿದು ಒಂದು ಆಯ್ಕೆ ಮಾಡಿಕೊಂಡು ಬಿಟ್ಟರೆ ಮದುವೆ ಕೂಡ ಅವರೇ ಮಾಡಿಸಿಬಿಡುತ್ತಾರೆ, ಸಧ್ಯ ಮಕ್ಕಳು ಕೂಡ ಹುಟ್ಟಿಸಿ ಕೊಡುತ್ತಿಲ್ಲ!. ಮೊದಲೇನೊ ಒಂಥರಾ ಚೆನ್ನಾಗಿತ್ತು ತಮ್ಮ ಮುಂದೆ ಬೆಳೆದ ಹುಡುಗ ಹುಡುಗಿಯರಲ್ಲಿ ಯಾರಿಗೆ ಯಾರು ಸರಿ ಹೋಗಬಹುದು ಅಂತ ಹಿರಿಯರು ನಿರ್ಧರಿಸಿ ಮದುವೆ ಮಾಡಿ ಬಿಡುತ್ತಿದ್ದರು (ಅದೇ ಚೆನ್ನಾಗಿತ್ತು ಅಂತಲ್ಲ, ಅದರಲ್ಲೂ ಸಾಧಕ ಬಾಧಕಗಳಿದ್ದವು). **ಈಗೇನೊ ಚಾಟಿಂಗನಲ್ಲಿ ಸಿಕ್ಕು, ಒರ್ಕುಟನಲ್ಲಿ ಫೋಟೊ ನೋಡಿ, ಫೋನಲ್ಲಿ ಫಿಕ್ಸ್ ಮಾಡಿ, ಹೊಟೇಲಲ್ಲಿ ಮದುವೆಯಾಗಿ ಬಿಡ್ತಾರೆ.**

ಅವರು ಮತ್ತೆ ಊರಿಗೆ ಹೊರಟು ರೆಡಿಯಾಗಿದ್ದರು, ಅಲ್ಲಿ ಮತ್ತಿನ್ನೂ ನೋಡೊದಿದೆ ಅಂತ. "ಹೀಗೇ ಹುಡುಕುತ್ತ ಹೋದ್ರೆ ಮುದುಕ ಆಗ್ತೀಯ, ನೀನೇ ಎಲ್ಲೊ ಒಂದು ನೋಡ್ಕೊಂಡು ಬಿಡು" ಅಂತಂದೆ "ಅದೇ ಒಳ್ಳೆದು ಅನಿಸ್ತಿದೆ" ಅಂದ, ಇವಳು "ರೀ ನಾನಿಲ್ವಾ ಹುಡುಕಿ ಮದುವೆ ಮಾಡ್ತೀನಿ ನನ್ನ ತಮ್ಮನಿಗೆ, ನೋಡ್ತಿರಿ" ಅಂದ್ಲು. ಅವರ ಬೀಳ್ಕೊಟ್ಟು ಮನೆಯೊಳಗೆ ಬಂದ್ವಿ ಸುಸ್ತಾಗಿತ್ತು ಹಾಗೆ ಹಾಸಿಗೆಗೆ ಜಾರಿದಳು, ಪಕ್ಕದಲ್ಲೇ ಕೂತ ನನ್ನ ಕೈ ಹಿಡಿದು "ರೀ ಏನೊ ಹೇಳ್ಬಿಟ್ಟೆ ನಾನಿದೀನಿ ಹುಡುಕ್ತೀನಿ ಅಂತ, ಎಲ್ರೀ ಹುಡುಕೋದು" ಅಂತ ಆತಂಕದಿಂದ ನುಡಿದಳು, ಅವಳಿಗೆ ನಿಜವಾಗಲೂ ಅದೊಂದು ಚಿಂತೆಯಾಗಿತ್ತು. "ಯಾಕೇ" ಅಂದೆ, "ಅಲ್ಲ ಈಗಾಗಲೇ ಹತ್ತಿಪ್ಪತ್ತು ನೋಡಿ ಆಯ್ತು ಯಾವುದು ಸರಿಹೋಗಿಲ್ಲ" ಅಂದ್ಲು. ಒಂದು ಹೇಳ್ತೀನಿ ಕೇಳ್ತೀರ ಅಂದೆ, ಏನು ಅನ್ನುವಂತೆ ನನ್ನೆಡೆಗೆ ಬಂದಳು ತೊಡೆ ಮೇಲೆ ತಲೆಯಿರಿಸಿದಳು, "ಮೊದಲು ನಿಮ್ಮ ಅಗತ್ಯ ಬೇಡಿಕೆಗಳನ್ನು ಕಡಿಮೆ ಮಾಡಿಕೊಳ್ಳಿ ಎಲ್ಲಾ ಸರಿ ಹೊಂದುವ ಹುಡುಗಿ ಸಿಗಲಿಕ್ಕಿಲ್ಲ, ಎರಡನೇದಾಗಿ ಸಿಕ್ಕ ಸಿಕ್ಕ ಹಾಗೆ ಗೊತ್ತಾದ ಎಲ್ಲವನ್ನೂ ನೋಡುತ್ತ ತಿರುಗಿದ್ರೆ, ಹೀಗೆ ಬ್ರೋಕರಗಳ ಹಿಂದೆ ಸುತ್ತುತ್ತಲೇ ಇರುತ್ತೀರಿ, ಅಲ್ಲೆ ಪರಿಚಯಸ್ತರ, ಸಂಬಂಧಿಗಳಲ್ಲಿ ಯಾರಾದರೂ ಮೊದಲಿಂದಲೂ ಗೊತ್ತಿರುವವರು ಇದ್ದರೆ ಪೂರ್ವ ತಪಾಸಣೆ ನಂತರ ಮುಂದುವರೆಯಿರಿ, ಸಿಕ್ತಾರೆ ಬ್ರಹ್ಮ ಎಲ್ಲೊ ಒಂದು ಜೋಡಿ ಸೃಷ್ಟಿ ಮಾಡಿಟ್ಟಿರ್ತಾನೆ" ಅಂದೆ "ನಿಮಗೆ ಮಾತ್ರ ನಾನು ಎಷ್ಟು ಸಲೀಸಾಗಿ ಸಿಕ್ಕೆ" ಅಂದ್ಲು "ಏನ್ ಮಾಡೊದು ಬಾ ಇನ್ನೂ ಹುಡುಕಿದ್ರೆ ಮಿಸ್ ಇಂಡಿಯಾನೇ ಸಿಕ್ಕಿರೋಳು" ಅಂದೆ, "ಕನ್ನಡೀಲಿ ಮುಖಾ ನೊಡ್ಕೊಳ್ಳಿ, ನಾನೇ ಇರಲಿ ಕ್ಯೂಟ್ ಟೆಡ್ಡಿಬಿಯರ ಇದ್ದ ಹಾಗೆ ಇದೀರ ಅಂತ ಒಪ್ಕೊಂಡಿದ್ದು" ಅಂದ್ಲು. ನಿಜ ಹೇಳ್ಬೇಕು ಅಂದ್ರೆ ನನ್ನ ಪಾಲಿಗೆ ಸಿಕ್ಕ ಇವಳೆ ವಿಶ್ವ ಸುಂದರಿ ನನಗೆ. "ಅದಾಯ್ತು ನೋಡು ನಿನ್ನ ತಮ್ಮನಿಗೆ ಎಲ್ಲೂ ಸಿಗದಿದ್ರೆ ಹೇಳು ಆ ಬಾಬ್ ಕಟ ರೋಸಿನಾ ಬೇಕಾದ್ರೆ ಒಪ್ಸೊದು ನನ್ನ ಜವಾಬ್ದಾರಿ" ಅಂದೆ. "ಅವನಿಗೆ ನೀಲವೇಣಿನಾ ತಂದು ಮದುವೆ ಮಾಡಿಸ್ತೀನಿ" ಅಂದ್ಲು. "ತಿರುಪತಿಗೆ ಮುಡಿ ಕೊಡು ಅಂತ ಅವಳ ತಲೆ ನಾ ತುಂಬ್ತೀನಿ" ಅಂದೆ. "ರೀ ಯಾಕ್ರೀ ಅವನ ಮೇಲೆ ಅಷ್ಟು ಸಿಟ್ಟು, ಅವನ ತಪ್ಪಿಂದ ನನ್ನ ಜಡೆ ಕಟ ಆಗಿದ್ರೂ ಈಗ ಮತ್ತೆ ಬೆಳೆದಿದೆ ಗೊತ್ತ" ಅಂತ ನನ್ನ ಮುಖಕ್ಕೆ ಅದರಲ್ಲಿ ಕಚಗುಳಿಯಿಟ್ಟಳು, ವೇಣಿಯೊಂದಿಗೆ ಆಟಕ್ಕಿಳಿದೆ. ಹೀಗೇ ಎಲ್ಲೊ ಹುಡುಕಾಟದಲ್ಲಿ ಮತ್ತೆ ಸಿಗೋಣ..

ಇಷ್ಟೊತ್ತು ಓದಿದ್ದು ಇಷ್ಟಾ ಆದ್ರೆ ಮೆಚ್ಚಿ, ಸಿಟ್ಟು ಬಂದಿದ್ರೆ ಚುಚ್ಚಿ ಇಂಚೆ (ಇ-ಅಂಚೆ) ಹಾಕಿ... ನನ್ನ ವಿಳಾಸ pm@telprabhu.com . ಹೀಗೆ ನೀವು ಓದಿ ಖುಶಿಯಾಗಿದ್ರೆ ನಿಮ್ಮ ಗೆಳೆಯರಿಗೂ ಇದನ್ನ ಕಳಿಸಿ, ಸಂತೋಷ ಇರೋದೇ ಹಂಚೋಕೆ ತಾನೆ...